# <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾದಂ. ನ್ಯಾಯಾಲಯ, ಕುಣಿಗಲ್.</u>

## <u>ಸಿ.ಸಿ. 1795/2024</u>

ಫಿರ್ಯಾದುದಾರರುಃ ಹುಲಿಯುರುದುರ್ಗ ಪೊಲೀಸರು

ವಿರುದ್ಧ

ಆರೋಪಿಗಳು : ಯಶೋವರ್ಧನ್.ಕೆ.ಎಲ್.

## ***<u>ದೋಷಾರೋಪಣೆ</u>***

**ಶ್ರೀಮತಿ ಗಂಗವ್ವ. ಆಯಟ್ಟಿ** ಬಿ.ಎ.ಎಲ್..ಎಲ್.ಬಿ., (Hon's) ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್ ಆದು ನಾನು, ಆರೋಪಿಗಳಾದ,

| | |
|---|---|
| | ಯಶೋವರ್ಧನ್.ಕೆ.ಎಲ್.<br>ಬಿನ್ ಲಕ್ಷ್ಮೀನಾರಾಯಣ ಜೆಯ್ಯರ್,<br>ವಯಸ್ಸುಃ 23 ವರ್ಷ,<br>ವಾಸಃ ಕೆಂಚನಹಳ್ಳಿ ಗ್ರಾಮ,<br>ಹುಲಿಯೂರುದುರ್ಗ ಹೋಬಳಿ,<br>ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ |

ನಿಮ್ಮ ಮೇಲೆ ಇಡುವ ಆರೋಪಗಳು ಏನೆಂದರೆ,

ಕುಣಿಗಲ್ ತಾಲ್ಲೂಕು, ಹುಲಿಯೂರುದುರ್ಗ ಪೋಲಿಸ್ ಠಾಣಾ ಸರಹದ್ದು, ಹುಲಿಯೂರುದುರ್ಗ ಹೋಬಳಿ, ಕೆಂಚನಹಳ್ಳಿ ಗ್ರಾಮದ ವೀರಾಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸೇರಿದ 150 ಗ್ರಾಂ ದೇವರ ಚಿನ್ನದ ಕಿರೀಟ, 50 ಗ್ರಾಂ ಚಿನ್ನದ ಪದಕ, ಬೆಳ್ಳಿ ಒಡವೆಗಳನ್ನು ಆರೋಪಿಯಾದ ನಿನ್ನ ಮನೆಯ ಲಾಕರ್ ನಲ್ಲಿ ಒಟ್ಟು 14 ಕೀಗಳಿಂದ ಬೀಗ ಹಾಕಿ ಇಡಲಾಗಿದ್ದು, ಸದರಿ 14 ಕೀಗಳ ಪೈಕಿ 7 ಕೀಗಳು ಚಾಸಾ–1 ರವರ ಬಳಿ ಇದ್ದು, ಉಳಿದ 7 ಕೀಗಳು ಚಾಸಾ–3 ರವರ ಬಳಿ ಇದ್ದು, ಆರೋಪಿಯಾದ ನೀನು ನಕಲಿ ಕೀಗಳನ್ನು

ಬಳಸಿಕೊಂಡು ಲಾಕರ್ ಅನ್ನು ತೆಗೆದು ಚಿನ್ನದ ಕಿರೀಟ, ಚಿನ್ನದ ಪದಕವನ್ನು ದಿನಾಂಕಃ 29.07.2024 ರಂದು ರಾಮನಗರದ ಅಟಿಕಾ ಗೋಲ್ಡ್ ಕಂಪನಿಗೆ ರೂ.1,75,000/- ಗಳಿಗೆ ಮಾರಟ ಮಾಡಿದ್ದರ ಪ್ರಯುಕ್ತ ಗ್ರಾಮಸ್ಥರುಗಳು ನಿನ್ನ ಮೇಲೆ ಇಟ್ಟಿದ್ದ ನಂಬಿಕೆಗೆ ದ್ರೋಹ ಮಾಡಿರುವುದರಿಂದ ನೀನು ಕಲಂ. 316 (2) ಹಾಗೂ 305 ಬಿ.ಎನ್.ಎಸ್.ರ ಅಡಿಯಲ್ಲಿ ನನ್ನ ಸಂಜ್ಞೆಯಲ್ಲಿ ಅಪರಾಧ ಎಸಗಿರುತ್ತೀರಿ?

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 17 ನೇ ಜೂನ್ 2025 sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್.

ಪ್ರಶ್ನೆ ಃ 1 ಈ ಮೇಲೆ ಓದಿ ಹೇಳಿದ ಆರೋಪಣೆ ನಿಮಗೆ ತಿಳಿಯಿತೇ?

ಉತ್ತರ ಃ ಆರೋಪಿ :

ಪ್ರಶ್ನೆ ಃ 2 ಸದರಿ ಆರೋಪಣೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ ಆಗಬೇಕೋ?

ಉತ್ತರ ಃ ಆರೋಪಿ :

**(ಮೇಲಿನ ಆಪಾದನೆಯನ್ನು ರಚಿಸಿ, ಆರೋಪಿಗಳಿಗೆ ಓದಿ ಹೇಳಿದಾಗ ಆರೋಪಿಗಳು ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ.)**

ದಿನಾಂಕಃ 17 ನೇ ಜೂನ್ 2025

sd/-

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಕುಣಿಗಲ್.